Paper : **II**

Subject : **COMMERCE**

Subject Code : **01**

Roll No. ____________

(Figures as per admission card)

OMR Sheet No. : ________________

**BOOKLET SERIAL NO.**

**Name & Signature of Invigilator/s**

Signature : ______________________

Name : ______________________

Time : 2 Hours

Maximum Marks : 200

Number of Pages in this Booklet : **32**

Number of Questions in this Booklet : **100**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ನೂರು (100) ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ :** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಈ ಪ್ರಶ್ನೆ ಪತ್ರಿಕೆಯ ಜೊತೆಯಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು.** OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMRನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

**Instructions for the Candidates**

1. Write your roll number in the space provided on the top of this page.
2. This paper consists of Hundred multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example :** (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside this Booklet.** If you mark at any place other than in the circles in the OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

## ವಾಣಿಜ್ಯ
## ಪೇಪರ್ – II

**ಗಮನಿಸಿ :** ಈ ಪತ್ರಿಕೆಯು **(100) ನೂರು** ವಸ್ತುನಿಷ್ಠಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** **ಪ್ರತಿಪಾದನೆ (A)** : ಭಾರತದ ಪಾವತಿ ಶೇಷ ಯಾವಾಗಲೂ ಅಸಮತೋಲನದಿಂದ ಕೂಡಿರುತ್ತದೆ.
**ಸಮರ್ಥನೆ (R)** : ವಿದೇಶಿ ವಿನಿಮಯದ ಬೇಡಿಕೆ ಅದರ ಪೂರೈಕೆಗಿಂತ ಹೆಚ್ಚಾಗಿರುತ್ತದೆ.
**ಸಂಕೇತಗಳು :**
(A) (A) ಮತ್ತು (R) ಗಳೆರಡೂ ಸರಿಯಾಗಿದ್ದು, (R) ಇದು (A) ಯ ಸರಿಯಾದ ವಿವರಣೆಯಾಗಿದೆ
(B) (A) ಮತ್ತು (R) ಗಳೆರಡೂ ಸರಿಯಾಗಿವೆ ಆದರೆ (R) ಇದು (A) ಯ ಸರಿಯಾದ ವಿವರಣೆಯಲ್ಲ
(C) (A) ಸರಿಯಾಗಿದೆ ಆದರೆ (R) ತಪ್ಪು
(D) (A) ತಪ್ಪು ಆದರೆ (R) ಸರಿ

**2.** **ಪ್ರತಿಪಾದನೆ (A)** : ಭಾರತದ ವಾಣಿಜ್ಯ ನೀತಿಗಳು ಈಗಲೂ ಆಂತರಿಕವಾಗಿ ಗಮನಹರಿಸುತ್ತಿವೆ.
**ಸಮರ್ಥನೆ (R)** : ಆಮದು-ರಫ್ತು (ಎಕ್ಸಿಮ್) ನೀತಿಯು ರಫ್ತು ಹೆಚ್ಚಿಸುವ ಅಭಿವೃದ್ಧಿ ಕ್ರಮಗಳ ಮೇಲೆ ಹೆಚ್ಚು ಕೇಂದ್ರೀಕೃತವಾಗಿದೆ.
**ಸಂಕೇತಗಳು :**
(A) (A) ಮತ್ತು (R) ಗಳೆರಡೂ ಸರಿಯಾಗಿದ್ದು, (R) ಇದು (A) ಯ ಸರಿಯಾದ ವಿವರಣೆಯಾಗಿದೆ
(B) (A) ಮತ್ತು (R) ಗಳೆರಡೂ ಸರಿಯಾಗಿವೆ ಆದರೆ (R) ಇದು (A) ಯ ಸರಿಯಾದ ವಿವರಣೆಯಲ್ಲ
(C) (A) ಮತ್ತು (R) ಗಳೆರಡೂ ಸರಿಯಾಗಿಲ್ಲ
(D) (A) ಸರಿಯಾಗಿಲ್ಲ ಆದರೆ (R) ಸರಿಯಾಗಿದೆ

**3.** ವಿದೇಶಿ ಹೂಡಿಕೆ ಅಭಿವೃದ್ಧಿ ಮಂಡಳಿ (ಎಫ್‌ಐಪಿಬಿ) ಯು ಈ ಖಾತೆಯಡಿ ಕೆಲಸ ನಿರ್ವಹಿಸುತ್ತದೆ.
(A) ವಿದೇಶಾಂಗ ವ್ಯವಹಾರ
(B) ಉದ್ಯಮ
(C) ಹಣಕಾಸು
(D) ಪಿಎಂಒ (PMO)

**4.** ಯುರೋಪಿಯನ್ ಒಕ್ಕೂಟ ಒಂದು
(A) ರಾಜಕೀಯ ಒಕ್ಕೂಟ
(B) ಸಾಮಾನ್ಯ ಒಕ್ಕೂಟ
(C) ಕಸ್ಟಮ್ಸ್ (ಸೀಮಾ ಶುಲ್ಕ) ಒಕ್ಕೂಟ
(D) ಆರ್ಥಿಕ ಒಕ್ಕೂಟ

**5.** ಕೆಳಗಿನವುಗಳನ್ನು ಜೋಡಿಸಿ.

| **ಪಟ್ಟಿ – I** | **ಪಟ್ಟಿ – II** |
|---|---|
| a. ಐಬಿಆರ್‌ಡಿ (IBRD) | i. ಬಡತನ ಕಡಿಮೆಗೊಳಿಸಲು ಅಭಿವೃದ್ಧಿಶೀಲ ದೇಶಗಳಿಗೆ ನೆರವಾಗುತ್ತದೆ |
| b. ಐಡಿಎ (IDA) | ii. ಪ್ರಪಂಚದ ಅತ್ಯಂತ ಬಡರಾಷ್ಟ್ರಗಳಿಗೆ ರಿಯಾಯಿತಿ ಸಾಲ ನೀಡಿಕೆ |
| c. ಐಎಫ್‌ಸಿ (IFC) | iii. ಖಾಸಗಿ ವಲಯಕ್ಕೆ ಹಣಕಾಸು ಒದಗಿಸುವಿಕೆ |
| d. ಎಂಐಜಿಎ (MIGA) | iv. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಹೆಚ್ಚಿಸುವುದು |

**ಸಂಕೇತಗಳು :**

| | **a** | **b** | **c** | **d** |
|---|---|---|---|---|
| (A) | ii | i | iv | iii |
| (B) | i | ii | iv | iii |
| (C) | ii | i | iii | iv |
| (D) | i | ii | iii | iv |

**6.** ತಾಜಾ ಉತ್ಪನ್ನ ಸೌಲಭ್ಯಗಳಿಗೆ ವಿದೇಶಿ ನೇರಹೂಡಿಕೆ (ಎಫ್‌ಡಿಐ) ಯನ್ನು ಹೀಗೆನ್ನುವರು.
(A) ಗ್ರೀನ್‌ಫೀಲ್ಡ್ ಹೂಡಿಕೆ
(B) ಬ್ರೌನ್‌ಫೀಲ್ಡ್ ಹೂಡಿಕೆ
(C) ಸಮತಲ ಹೂಡಿಕೆ (ಅಡ್ಡ ಹೂಡಿಕೆ)
(D) ಲಂಬ ಹೂಡಿಕೆ

**7.** 'ಮೈಸೂರು ಸಿಲ್ಕ್' ಅನ್ನು ಇದರಡಿಗೆ ಸೇರಿಸಬಹುದು.
(A) ಸ್ವಾಮ್ಯದ ಸನ್ನದು
(B) ಕೃತಿಸ್ವಾಮ್ಯ
(C) ಟ್ರೇಡ್‌ಮಾರ್ಕ್ (ವ್ಯಾಪಾರ ಚಿಹ್ನೆ)
(D) ಭೌಗೋಳಿಕ ಕುರುಹು

# COMMERCE
## Paper – II

**Note :** This paper contains **hundred (100)** objective type questions. **Each** question carries **two (2)** marks. **All** questions are **compulsory**.

1. **Assertion (A)** : India's balance of payments is always in disequilibrium.
   **Reason (R)** : The demand for foreign exchange is more than its supply.
   **Codes :**
   (A) Both (A) and (R) are correct and (R) is the correct explanation of (A)
   (B) Both (A) and (R) are correct but (R) is not the correct explanation of (A)
   (C) (A) is correct but (R) is incorrect
   (D) (A) is incorrect but (R) is correct

2. **Assertion (A)** : India's trade policies are still inward looking.
   **Reason (R)** : The focus of EXIM policy is more on export promotion measures.
   **Codes :**
   (A) Both (A) and (R) are correct and (R) is the correct explanation of (A)
   (B) Both (A) and (R) are correct but (R) is not the correct explanation of (A)
   (C) Both (A) and (R) are incorrect
   (D) (A) is incorrect but (R) is correct

3. Foreign Investment Promotion Board is under the ministry of
   (A) External affairs
   (B) Industry
   (C) Finance
   (D) PMO

4. The European Union is a
   (A) Political Union
   (B) Common Union
   (C) Customs Union
   (D) Economic Union

5. Match the following :

| | List – I | | List – II |
|---|---|---|---|
| a. | IBRD | i. | Help developing countries reduce poverty |
| b. | IDA | ii. | Concessional loans to the world's poorest countries |
| c. | IFC | iii. | Finance to the private sector |
| d. | MIGA | iv. | Promotes FDI into developing countries |

   **Codes :**

| | a | b | c | d |
|---|---|---|---|---|
| (A) | ii | i | iv | iii |
| (B) | i | ii | iv | iii |
| (C) | ii | i | iii | iv |
| (D) | i | ii | iii | iv |

6. FDI into fresh production facilities is known as
   (A) Greenfield investment
   (B) Brownfield investment
   (C) Horizontal investment
   (D) Vertical investment

7. 'Mysore Silk' can be included under
   (A) Patent
   (B) Copyright
   (C) Trademark
   (D) Geographical indication

**8.** ಬಿಮ್‌ಸ್ಟೆಕ್ (BIMSTEC) ಈ ಸಂಕ್ಷಿಪ್ತರೂಪದ ಸರಿಯಾದ ವಿಸ್ತರಣೆ

(A) ಬಹುಕ್ಷೇತ್ರೀಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರಕ್ಕಾಗಿ ಬಂಗಾಳ ಕೊಲ್ಲಿಯ ಉಪಕ್ರಮ

(B) ಬಹುಕ್ಷೇತ್ರೀಯ ವ್ಯಾಪಾರ ಮತ್ತು ಆರ್ಥಿಕ ಸಹಕಾರಕ್ಕಾಗಿ ಬಂಗಾಳ ಕೊಲ್ಲಿಯ ಉಪಕ್ರಮ

(C) ಬಹುಕ್ಷೇತ್ರೀಯ ವ್ಯಾಪಾರ ಮತ್ತು ಆರ್ಥಿಕ ಸಹಕಾರಕ್ಕಾಗಿ ಬಾಂಗ್ಲಾದೇಶ ಉಪಕ್ರಮ

(D) ಬಹುಕ್ಷೇತ್ರೀಯ ವ್ಯಾಪಾರ ಮತ್ತು ಆರ್ಥಿಕ ಸಹಕಾರಕ್ಕಾಗಿ ಬಾಂಗ್ಲಾದೇಶದ ಸಂಸ್ಥೆ

**9.** ಅಂಕ್ಟಾಡ್ (UNCTAD) ನ ಪ್ರಮುಖ ಉದ್ದೇಶ ಇದಾಗಿದೆ.

(A) ವ್ಯಾಪಾರ ವಿಷಯವಾಗಿ ಮಾತ್ರ ವ್ಯವಹರಿಸುವುದು

(B) ವ್ಯಾಪಾರ ಮತ್ತು ವಿಕಾಸ ವಿಷಯವಾಗಿ ವ್ಯವಹರಿಸುವುದು

(C) ಅಭಿವೃದ್ಧಿಶೀಲ ರಾಷ್ಟ್ರಗಳ ವ್ಯಾಪಾರ, ಹೂಡಿಕೆ ಮತ್ತು ಅಭಿವೃದ್ಧಿ ವಿಷಯವಾಗಿ ವ್ಯವಹರಿಸುವುದು

(D) ಕನಿಷ್ಠ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ವ್ಯಾಪಾರ, ಹೂಡಿಕೆ ಮತ್ತು ಅಭಿವೃದ್ಧಿಗಳ ವಿಷಯವಾಗಿ ವ್ಯವಹರಿಸುವುದು

**10.** ವಿದೇಶಿ ಮಾರುಕಟ್ಟೆಗಳಲ್ಲಿ ಯಶಸ್ವಿ ವ್ಯವಹಾರ ಸ್ವರೂಪವೊಂದನ್ನು ನಕಲು ಮಾಡುವ ಹಕ್ಕಿನ ಪರವಾನಗಿ ಪಡೆಯುವುದನ್ನಾಧರಿಸಿದ ಒಂದು ವ್ಯವಸ್ಥೆ

(A) ಪಾಲುಗಾರಿಕೆ ಹೊಂದುವುದು

(B) ಪರವಾನಗಿ ಪಡೆಯುವುದು

(C) ಫ್ರಾಂಚೈಸಿಂಗ್ (ವಿಶೇಷಾಧಿಕಾರ)

(D) ಕರಾರು ತಯಾರಿಕೆ

**11.** ಈ ಲೆಕ್ಕಪತ್ರಗಳ ಪರಿಕಲ್ಪನೆಯನ್ನು ಅಂಗೀಕರಿಸುವಲ್ಲಿ ಪೋಷಕ ಅಧೀನ ಸಂಸ್ಥೆ ಸಂಬಂಧ ಅಸ್ತಿತ್ವದಲ್ಲಿದ್ದಾಗ ಕ್ರೋಢೀಕೃತ ಹಣಕಾಸು ಒಕ್ಕಣಿಕೆಗಳು ಸಿದ್ಧಗೊಳ್ಳುತ್ತವೆ.

(A) ಭೌತಿಕತೆ

(B) ಲಾಭದಲ್ಲಿ ನಡೆಯುತ್ತಿರುವ ವ್ಯವಹಾರ

(C) ವಾಸ್ತವಿಕತೆ

(D) ಘಟಕ

**12.** ಇವುಗಳಲ್ಲಿ ಯಾವುದನ್ನು ಸಾಮಾನ್ಯ ಮತ್ತು ಆಡಳಿತಾತ್ಮಕ ವೆಚ್ಚಗಳಿಗೆ ಸೇರಿಸಬೇಕು ?

| | **ಬಡ್ಡಿ** | **ಜಾಹೀರಾತು** |
|---|---|---|
| (A) | ಬೇಕು | ಬೇಡ |
| (B) | ಬೇಕು | ಬೇಕು |
| (C) | ಬೇಡ | ಬೇಡ |
| (D) | ಬೇಡ | ಬೇಕು |

**13.** ಐಸಿಎಐ (ICAI) ಮಂಡಳಿಯಿಂದ ಹೊರಡಿಸಲ್ಪಟ್ಟ ಎಎಎಸ್2 (AAS2) ರ ಶೀರ್ಷಿಕೆ

(A) ಹಣಕಾಸು ವಿವರಣೆ ಲೆಕ್ಕಪರಿಶೋಧನೆಯ ಉದ್ದೇಶಗಳು ಮತ್ತು ವ್ಯಾಪ್ತಿ

(B) ಹಣಕಾಸು ವಿವರಣೆಗಳ ಉದ್ದೇಶ ಮತ್ತು ವ್ಯಾಪ್ತಿ

(C) ಲೆಕ್ಕಪರಿಶೋಧನೆಯ ಹಣಕಾಸು ವಿವರಣೆಗಳ ಉದ್ದೇಶ ಮತ್ತು ವ್ಯಾಪ್ತಿ

(D) ಘಟಕವೊಂದರ ವ್ಯವಹಾರದ ಉದ್ದೇಶ ಮತ್ತು ವ್ಯಾಪ್ತಿ

**14.** ಭಾರತದಲ್ಲಿ ಲೆಕ್ಕಪತ್ರ ಮಾನಕ ಮಂಡಳಿ (ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ ಬೋರ್ಡ್) ರಚನೆಗೊಂಡ ಅವಧಿ

(A) ಆಗಸ್ಟ್ 1987

(B) ಜನವರಿ 1987

(C) ಜೂನ್ 1977

(D) ಏಪ್ರಿಲ್ 1977

**15.** ಯುಕ್ತ ವಸ್ತುನಿಷ್ಠ ಆಧಾರ ಸಾಧಿಸಲು, ವಿತ್ತೀಯ ಅಂದಾಜುಗಣನೆಗಳು ಮತ್ತು ಹಂಚಿಕೆಗಳನ್ನು ಇದಕ್ಕನುಸಾರ ಸಿದ್ಧಪಡಿಸಬೇಕು.

i. ಸಾಮಾನ್ಯವಾಗಿ ಅಂಗೀಕೃತ ಲೆಕ್ಕಶಾಸ್ತ್ರ ಸೂತ್ರಗಳಿಗನುಗುಣವಾಗಿ

ii. ವ್ಯವಹಾರ ಘಟಕದ ಯೋಜನೆಗಳಿಗನುಗುಣವಾದ ಮಾಹಿತಿಯನ್ನು ಉಪಯೋಗಿಸಿಕೊಂಡು

iii. ಅಗತ್ಯವಿರುವಷ್ಟು ವೃತ್ತಿಪರ ಕಾಳಜಿಯೊಂದಿಗೆ

**ಸಂಕೇತಗಳು :**

(A) i ಮತ್ತು iii  (B) i, ii ಮತ್ತು iii

(C) ii ಮತ್ತು iii  (D) i ಮತ್ತು ii

**8.** The correct expansion of the acronym BIMSTEC
(A) Bay of Bengal Initiative for multi-sectoral technical and economic co-operation
(B) Bay of Bengal Initiative for multi-sectoral trade and economic co-operation
(C) Bangladesh Initiative for multi-sectoral trade and economic co-operation
(D) Bangladesh Institute for multi-sectoral trade and economic co-operation

**9.** The main objective of UNCTAD is
(A) To deal with only trade
(B) To deal with trade and development
(C) To deal with trade, investment and development of developing countries
(D) To deal with trade, investment and development of least developed countries

**10.** A system based on the licensing of the right to duplicate a successful business format in foreign markets is known as
(A) Partnering
(B) Licensing
(C) Franchising
(D) Contract manufacturing

**11.** Consolidated financial statements are prepared when a parent subsidiary relationship exists in recognition of the accounting concept of
(A) Materiality
(B) Going concern
(C) Objectivity
(D) Entity

**12.** Which of the following should be included in general and administrative expenses ?

| | **Interest** | **Advertising** |
|---|---|---|
| (A) | Yes | No |
| (B) | Yes | Yes |
| (C) | No | No |
| (D) | No | Yes |

**13.** The title of AAS2 issued by Council of ICAI is
(A) Objective and scope of financial statements audit
(B) Objective and scope of the financial statements
(C) Objective and scope of the audit of financial statements
(D) Objective and scope of business of an entity

**14.** Formation of Accounting Standards Board in India is during
(A) August 1987
(B) January 1987
(C) June 1977
(D) April 1977

**15.** To achieve a reasonably objective basis, financial forecasts and projection should be prepared
i. In accordance with GAAP.
ii. Using information that is in accordance with the plans of the entity.
iii. With due professional care.

**Codes :**
(A) i and iii
(B) i, ii and iii
(C) ii and iii
(D) i and ii

16. ಕೆಳಗಿನವುಗಳನ್ನು ಹೊಂದಿಸಿ.

| **ಪಟ್ಟಿ – I (ಎಚ್‌ಆರ್ ಅಕೌಂಟಿಂಗ್ ಮಾದರಿ)** | **ಪಟ್ಟಿ – II (ಪ್ರತಿಪಾದಕರು)** |
|---|---|
| a. ಸ್ಥಳಾಂತರ ವೆಚ್ಚ ಆಧಾರಿತ ಪ್ರಸ್ತಾವ | i. ಗೈಲ್ಸ್ ಮತ್ತು ರಾಬಿನ್ಸನ್ |
| b. ಅವಕಾಶ ವೆಚ್ಚ ಮಾದರಿ | ii. ಫ್ಲಾನ್‌ಹೋಲ್ಟ್ಜ |
| c. ಮಾನವ ಸಂಪತ್ತು ಗುಣಕ ವಿಧಾನ | iii. ಲಿಕರ್ಟ್ |
| d. ಮಾನವ ಸಂಸ್ಥೆಗಳ ಮೌಲ್ಯಮಾಪನದ ಮೇಲಿನ ಮಾದರಿ | iv. ಹೆಕಿಮ್ಯೆನ್ ಮತ್ತು ಜೋನ್ಸ್ |

**ಸಂಕೇತಗಳು :**

| | **a** | **b** | **c** | **d** |
|---|---|---|---|---|
| (A) | iv | i | iii | ii |
| (B) | ii | iv | i | iii |
| (C) | i | iii | iv | ii |
| (D) | iii | ii | iv | i |

17. **ಪ್ರತಿಪಾದನೆ (A)** : ಸ್ಥಿರ ಬಜೆಟ್ ಸ್ಥಿರಾಸ್ತಿಗಳ ಆಯವ್ಯಯ ಪಟ್ಟಿ ರಚನೆಗೆ ಸಂಬಂಧಿಸಿದೆ.

**ಸಮರ್ಥನೆ (R)** : ವೆಚ್ಚಕೇಂದ್ರ (ಕಾಸ್ಟ್ ಸೆಂಟರ್) ಮತ್ತು ಜವಾಬ್ದಾರಿ ಕೇಂದ್ರಗಳು ಏಕರೂಪದ ಪದಗಳಲ್ಲ.

**ಸಂಕೇತಗಳು :**

(A) (A) ಮತ್ತು (R) ಗಳೆರಡೂ ಸರಿ

(B) (A) ಮತ್ತು (R) ಗಳೆರಡೂ ಸರಿಯಲ್ಲ

(C) (A) ಸರಿ, ಆದರೆ (R) ತಪ್ಪು

(D) (A) ತಪ್ಪು, ಆದರೆ (R) ಸರಿ

18. ಸಾಮರ್ಥ್ಯ ಪ್ರಮಾಣ × ದಕ್ಷತೆ ಪ್ರಮಾಣ =

(A) ಚಟುವಟಿಕೆ ಅನುಪಾತ

(B) ಲಾಭದಾಯಕತೆ ಅನುಪಾತ

(C) ಸಾಲ ಮರುಪಾವತಿ ಶಕ್ತಿ ಅನುಪಾತ

(D) ದ್ರವ್ಯತೆ ಅನುಪಾತ

19. ವರ್ಷ ಪೂರ್ತಿ ಖಾತಾ ಪುಸ್ತಕಗಳ ನಿರಂತರ ಪರಿಶೀಲನೆಯೆಂದರೆ

(A) ಸಾಂದರ್ಭಿಕ ಲೆಕ್ಕಪರಿಶೋಧನೆ

(B) ಆಂತರಿಕ ಲೆಕ್ಕಪರಿಶೋಧನೆ

(C) ಆವರ್ತಕ ಲೆಕ್ಕಪರಿಶೋಧನೆ

(D) ನಿರಂತರ ಲೆಕ್ಕಪರಿಶೋಧನೆ

20. ಇವುಗಳನ್ನು ಹೊಂದಿಸಿ.

| **ಪಟ್ಟಿ – I** | **ಪಟ್ಟಿ – II** |
|---|---|
| a. ವಿಭಾಗ ವರದಿ | i. ಎಎಸ್-26 |
| b. ಗೋಚರವಾಗದ ಆಸ್ತಿಗಳು | ii. ಎಎಸ್-19 |
| c. ಅಕೌಂಟಿಂಗ್ ಹೂಡಿಕೆಗಳು | iii. ಎಎಸ್-17 |
| d. ಗುತ್ತಿಗೆಗಳು (ಲೀಸ್) | iv. ಎಎಸ್-13 |

**ಸಂಕೇತಗಳು :**

| | **a** | **b** | **c** | **d** |
|---|---|---|---|---|
| (A) | iii | i | iv | ii |
| (B) | i | iii | ii | iv |
| (C) | iv | iii | i | ii |
| (D) | i | iv | ii | iii |

21. **ಪ್ರತಿಪಾದನೆ (A)** : ಕೊಡುಗೆಗಳು ಮತ್ತು 'ಒಂದು ಕೊಂಡರೆ ಇನ್ನೊಂದು ಉಚಿತ' (BoGo) ರೀತಿಯ ಮಾರಾಟಗಳು ಪ್ರವೇಶಕ ಬೆಲೆ ನಿಗದಿ (ಪೆನಿಟ್ರೇಶನ್)ಗೆ ಉದಾಹರಣೆಗಳಾಗಿವೆ.

**ಸಮರ್ಥನೆ (R)** : ತಯಾರಕರು ತಾತ್ಕಾಲಿಕವಾಗಿ ಹಣ ಕಳೆದುಕೊಳ್ಳುತ್ತಾರೆ, ಆದರೆ ಹೊಸ ಉತ್ಪನ್ನದಲ್ಲಿ ಆಸಕ್ತಿ ಮೂಡಿಸುವ ಭರವಸೆಯಿಂದ ಅವರು ಹಾಗೆ ಮಾಡುತ್ತಾರೆ.

**ಸಂಕೇತಗಳು :**

(A) (A) ಮತ್ತು (R) ಗಳೆರಡೂ ನಿಜ ಮತ್ತು (R) ಇದು (A) ಗೆ ಸರಿಯಾದ ವಿವರಣೆ

(B) (A) ಮತ್ತು (R) ಗಳೆರಡೂ ನಿಜ ಆದರೆ (R) ಇದು (A) ಯ ಸರಿಯಾದ ವಿವರಣೆಯಲ್ಲ

(C) (A) ಸರಿಯಾಗಿದೆ, ಆದರೆ (R) ಸರಿಯಾಗಿಲ್ಲ

(D) (A) ಸರಿಯಾಗಿಲ್ಲ, ಆದರೆ (R) ಸರಿಯಾಗಿದೆ

**16.** Match the following :

| **List – I (HR Accounting Model)** | **List – II (Proponents)** |
|---|---|
| a. Replacement cost-based approach | i. Giles and Robinson |
| b. Opportunity cost model | ii. Flanholtz |
| c. Human asset multiplier method | iii. Likert |
| d. A model on valuation of human organisation | iv. Hekimain and Jones |

**Codes :**

| | **a** | **b** | **c** | **d** |
|---|---|---|---|---|
| (A) | iv | i | iii | ii |
| (B) | ii | iv | i | iii |
| (C) | i | iii | iv | ii |
| (D) | iii | ii | iv | i |

**17.** **Assertion (A)** : Fixed budget is concerned with budgeting of fixed assets.

**Reason (R)** : Cost centre and responsibility centre are not homogeneous terms.

**Codes :**

(A) Both (A) and (R) are correct
(B) Both (A) and (R) are incorrect
(C) (A) is correct, but (R) is incorrect
(D) (A) is incorrect, but (R) is correct

**18.** Capacity ratio × efficiency ratio =

(A) Activity ratio
(B) Profitability ratio
(C) Solvency ratio
(D) Liquidity ratio

**19.** Continuous examination of books of accounts throughout the year is called

(A) Occational audit
(B) Internal audit
(C) Periodic audit
(D) Perpetual audit

**20.** Match the following :

| **List – I** | **List – II** |
|---|---|
| a. Segment reporting | i. AS-26 |
| b. Intangible assets | ii. AS-19 |
| c. Accounting investments | iii. AS-17 |
| d. Leases | iv. AS-13 |

**Codes :**

| | **a** | **b** | **c** | **d** |
|---|---|---|---|---|
| (A) | iii | i | iv | ii |
| (B) | i | iii | ii | iv |
| (C) | iv | iii | i | ii |
| (D) | i | iv | ii | iii |

**21.** **Assertion (A)** : Giveaways and buy-one, get-one (BoGo) sales are examples for penetration pricing.

**Reason (R)** : The manufacturer temporarily loses money, but does so in the hope of creating interest in the new product.

**Codes :**

(A) Both (A) and (R) are true and (R) is the correct explanation of (A)
(B) Both (A) and (R) are true but (R) is not the correct explanation of (A)
(C) (A) is correct, but (R) is incorrect
(D) (A) is incorrect, but (R) is correct

**22.** ಏಕಸ್ವಾಮ್ಯತೆ ಕುರಿತು ಅರ್ಥಶಾಸ್ತ್ರಜ್ಞರ ಪ್ರಮುಖ ಆಕ್ಷೇಪಣೆಯಿದು.

(A) ಇಂತಹ ಉದ್ಯಮಗಳಲ್ಲಿನ ತಾಂತ್ರಿಕ ಪ್ರಗತಿಯ ಕೊರತೆ

(B) ಜನಸಂಖ್ಯಾ ಸಂಬಂಧಿತವಾಗಿ ಸರ್ಕಾರದ ಮೇಲೆ ಅಪಾಯಕಾರಿ ಪರಿಣಾಮ

(C) ಏಕಮಾತ್ರ ಉತ್ಪಾದಕರಿರುವ ಉದ್ಯಮದಲ್ಲಿ ಅಸ್ಥಿರತೆ

(D) ಉತ್ಪಾದನೆ ಹತ್ತಿಕ್ಕಿ ಹೆಚ್ಚು ಬೆಲೆ ಹೊರಿಸುವ ಪ್ರವೃತ್ತಿ

**23.** ಇವನ್ನು ಸರಿಹೊಂದಿಸಿ.

| | **ಪಟ್ಟಿ – I** | | **ಪಟ್ಟಿ – II** |
|---|---|---|---|
| a. | ಲೆಕ್ಕಪತ್ರ ದೃಷ್ಟಿಕೋನ | i. | ಸೂಚ್ಯ ವೆಚ್ಚ |
| b. | ಆರ್ಥಿಕ ದೃಷ್ಟಿಕೋನ | ii. | ವಿನಿಯೋಗ ವೆಚ್ಚ |
| c. | ಸಮಯ ಪ್ರಜ್ಞೆ | iii. | ನೇರ ವೆಚ್ಚ |
| d. | ಅನುಸರಣೀಯತೆ | iv. | ಹಿಸ್ಟಾರಿಕಲ್ (ಮೂಲ ಬೆಲೆ ನಮೂದಿತ) ವೆಚ್ಚ |

**ಸಂಕೇತಗಳು :**

| | **a** | **b** | **c** | **d** |
|---|---|---|---|---|
| (A) | i | ii | iv | iii |
| (B) | ii | i | iii | iv |
| (C) | ii | i | iv | iii |
| (D) | i | ii | iii | iv |

**24.** ಕೆಳಗಿನವುಗಳಲ್ಲಿ ಯಾವುದು/ ಯಾವುವು ವ್ಯಾವಹಾರಿಕ ಅರ್ಥಶಾಸ್ತ್ರದ ಗುಣಲಕ್ಷಣವಾಗಿದೆ/ವೆ ?

i. ವ್ಯಾವಹಾರಿಕ ಅರ್ಥಶಾಸ್ತ್ರ ಸೂಕ್ಷ್ಮ ಆರ್ಥಿಕ ಗುಣಲಕ್ಷಣ ಹೊಂದಿದೆ.

ii. ಸ್ವರೂಪದಲ್ಲಿ ಇದು ರಚನಾತ್ಮಕವಾಗಿದೆ.

iii. ಪರಿಕಲ್ಪನೆಯ ಮತ್ತು ಅಳತೆಗೊಳಪಡುವ ಎರಡೂ ಲಕ್ಷಣಗಳಿವೆ.

iv. ಇದರ ಅಡಕಾಂಶಗಳು ಪ್ರಮುಖವಾಗಿ ಸಂಸ್ಥೆಯ ನಿಯಮವನ್ನಾಧರಿಸಿವೆ.

**ಸಂಕೇತಗಳು :**

(A) i, ii ಮತ್ತು iii

(B) iv ಮಾತ್ರ

(C) i, iii ಮತ್ತು iv

(D) i, ii ಮತ್ತು iv

**25.** ಇವುಗಳಲ್ಲಿ ಯಾವುದು ಉಪೇಕ್ಷೆ (ಇಂಡಿಫರೆನ್ಸ್) ಕರ್ವ್‌ಗಳ ಗುಣಲಕ್ಷಣವಲ್ಲ ?

(A) ಕೆಳಮುಖ ಇಳಿಜಾರು

(B) ಮೂಲಬಿಂದುವಿಗೆ ನಿಮ್ನತೆ

(C) ಒಂದೇ ಮಟ್ಟದಲ್ಲಿ ಉಪಯುಕ್ತತೆ ದೊರಕಿಸುವ ಎರಡು ಸರಕುಗಳ ಭಿನ್ನ ಸಂಯೋಜನೆಗಳನ್ನು ತೋರಿಸುವುದು

(D) ಒಂದನ್ನೊಂದು ಸ್ಪರ್ಶಿಸುವುದಿಲ್ಲ

**26.** ತಾಂತ್ರಿಕತೆ ಬದಲಿ ಆಯ್ಕೆಯ ಕನಿಷ್ಠ ಮಿತಿ ದರ ಎರಡು ವಸ್ತುಗಳು ಹೀಗಿದ್ದಾಗ ಸ್ಥಿರವಾಗಿರುತ್ತದೆ.

(A) ಪರಿಪೂರ್ಣ ಬದಲಿವಸ್ತುಗಳು

(B) ಪರಿಪೂರ್ಣ ಪೂರಕಗಳು

(C) ಸಾಮಾನ್ಯ ಸರಕುಗಳು

(D) ಗಿಫ್ಫಿನ್ ಸರಕುಗಳು

**27.** ನಾವಿದನ್ನು ನಿಶ್ಚಿತವಾಗಿ ಹೇಳಬಹುದು, ದೀರ್ಘಾವಧಿಯಲ್ಲಿ ಟಿವಿಗಳಿಗೆ ಬೇಡಿಕೆ ಅಧಿಕವಾದಾಗ, ಬೆಲೆಗಳು

(A) ಇಳಿಯುವುದು

(B) ಏರುವುದು

(C) ಮೊದಲಿನ ಮಟ್ಟದಲ್ಲಿಯೇ ಉಳಿಯುವುದು

(D) ಬೇಡಿಕೆಯ ಸ್ಥಿತಿಸ್ಥಾಪಕತ್ವ ತಿಳಿದುಕೊಳ್ಳದೆ ಊಹಿಸಲಾಗದು

**28.** ಬೆಲೆಯಲ್ಲಿನ ಬದಲಾವಣೆ ಮತ್ತು ಒಟ್ಟು ಆದಾಯಗಳು ಒಂದೇ ದಿಕ್ಕಿನಲ್ಲಿದ್ದರೆ, ಸ್ಥಿತಿಸ್ಥಾಪಕತ್ವ ಇದಕ್ಕೆ ಸರಿಯಾಗಿರುತ್ತದೆ.

(A) $> 1$ (B) $< 1$

(C) 0 (D) 1

**29.** ಮಾರ್ಜಿನ್ ಆದಾಯ (MR) ಋಣಾತ್ಮಕವಿದ್ದರೆ, ಬೆಲೆ ಸ್ಥಿತಿಸ್ಥಾಪಕತ್ವ

(A) $> 1$ (B) $< 1$

(C) 0 (D) 1

**22.** The major objection of economists to monopolies is

(A) The lack of technological progress in such industries

(B) The dangerous impact on demographic government

(C) The instability in an industry where there is a single producer

(D) The tendency to restrict output and charge higher price

**23.** Match the following :

| | **List – I** | | **List – II** |
|---|---|---|---|
| a. | Accounting view point | i. | Implicit cost |
| b. | Economic view point | ii. | Outlay cost |
| c. | Timing | iii. | Direct cost |
| d. | Traceability | iv. | Historical cost |

**Codes :**

| | **a** | **b** | **c** | **d** |
|---|---|---|---|---|
| (A) | i | ii | iv | iii |
| (B) | ii | i | iii | iv |
| (C) | ii | i | iv | iii |
| (D) | i | ii | iii | iv |

**24.** Which of the following is/are the characteristic(s) of Business Economics ?

i. Business economics is micro economic in character.

ii. It is positive in nature.

iii. It is both conceptual and metrical.

iv. Its contents are based mainly on the theory of firm.

**Codes :**

(A) i, ii and iii

(B) only iv

(C) i, iii and iv

(D) i, ii and iv

**25.** Which of the following is not the property of indifference curves ?

(A) Downward sloping

(B) Concave to origin

(C) Show different combinations of the two goods yielding the same level of utility

(D) Don't touch is other

**26.** Marginal rate of technical substitution is constant when two goods are

(A) Perfect substitutes

(B) Perfect complements

(C) Normal goods

(D) Giffen goods

**27.** We can say with certainty that when the demand for TVs increases in the long-run, prices

(A) Will go down

(B) Will go up

(C) Stay at the original level

(D) Cannot be predicted without the knowledge of elasticity of demand

**28.** When the change in price and total revenue are in the same direction, price elasticity is equal to

(A) $> 1$ (B) $< 1$

(C) 0 (D) 1

**29.** When MR is negative, price elasticity is

(A) $> 1$ (B) $< 1$

(C) 0 (D) 1

**30.** ಬೆಲೆ ಸ್ಥಿತಿಸ್ಥಾಪಕತ್ವ ಇದಾಗಿದೆ
(A) ಬೇಡಿಕೆ ವಕ್ರರೇಖೆ (ಕರ್ವ್)ನ ಇಳಿಜಾರು
(B) ಸಾಮಾನ್ಯವಾಗಿ ಯುನಿಟಿಗಿಂತ ಹೆಚ್ಚಾಗಿರುತ್ತದೆ
(C) ಸಾಮಾನ್ಯವಾಗಿ ಯುನಿಟಿಗಿಂತ ಕಡಿಮೆಯಿರುತ್ತದೆ
(D) ಅವಲಂಬಿತ ಮಾರ್ಪುಕ ಮತ್ತು ಅವಲಂಬಿತವಲ್ಲದ ಮಾರ್ಪುಕ (ವೇರಿಯೇಬಲ್)ಗಳ ನಡುವಿನ ಸಾಪೇಕ್ಷ ವ್ಯತ್ಯಾಸದ ಅನುಪಾತ

**31.** ಇವುಗಳನ್ನು ಹೊಂದಿಸಿ.

| **ಪಟ್ಟಿ – I** | **ಪಟ್ಟಿ – II** |
|---|---|
| a. ಎನ್ಐ (NI) ಮಾದರಿ | I. ಇಕ್ವಿಟಿಯ ವೆಚ್ಚವು ವಿಪರೀತ ಲಿವರೇಜ್ (ಸಾಲ) ನಿಂದ ಕ್ಷಿಪ್ರವಾಗಿ ಏರುವುದು |
| b. ಎನ್ಒಐ (NOI) ಮಾದರಿ | II. ವಿಪರೀತ ಲಿವರೇಜ್‌ನಡಿ ಇಕ್ವಿಟಿ ವೆಚ್ಚ ಇಳಿಕೆ |
| c. ಸಾಂಪ್ರದಾಯಿಕ ಪೂರ್ವಸಿದ್ಧಾಂತ | III. ಎಲ್ಲಾ ಲಿವರೇಜ್‌ಗಳಿಗೆ ಇಕ್ವಿಟಿ ವೆಚ್ಚ ಸ್ಥಿರ |
| d. ಎಂಎಂ (MM) ಪೂರ್ವಸಿದ್ಧಾಂತ | IV. ಲಿವರೇಜ್ ಹೆಚ್ಚಾದಾಗ ಇಕ್ವಿಟಿ ವೆಚ್ಚ ಹೆಚ್ಚಾಗುತ್ತದೆ |
| | V. ಲಿವರೇಜ್ ಹೆಚ್ಚಾದಾಗ ಇಕ್ವಿಟಿ ವೆಚ್ಚ ಕಡಿಮೆಯಾಗುತ್ತದೆ |

**ಸಂಕೇತಗಳು :**

| | a | b | c | d |
|---|---|---|---|---|
| (A) | V | IV | I | II |
| (B) | III | IV | II | I |
| (C) | III | IV | I | II |
| (D) | IV | III | I | II |

**32.** ____________ ಸಾಲದ ಅವಧಿ ಮುಕ್ತಾಯವನ್ನಾಧರಿಸಿ ಸಾಲ ಮಾರುಕಟ್ಟೆಯು ಅನೇಕ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆಯೆಂದು ಭಾವಿಸುತ್ತದೆ.
(A) ದ್ರವ್ಯತೆ ಸಿದ್ಧಾಂತ
(B) ಖಂಡಾತ್ಮಕ ಮಾರುಕಟ್ಟೆ ಸಿದ್ಧಾಂತ
(C) ನಿರೀಕ್ಷಾ ಸಿದ್ಧಾಂತ
(D) ದ್ರವ್ಯತೆಯ ಪ್ರೀಮಿಯಂ ಸಿದ್ಧಾಂತ

**33.** ಕಂಪೆನಿಯ ಸಾಲಗಾರರಿಗೆ ವಾಗ್ದಾನ ಭಂಗವಾದಾಗ ಅಥವಾ ಅತ್ಯಂತ ಕಷ್ಟಪಟ್ಟು ಮಾನ್ಯಮಾಡಿದಾಗ ಅಂತಹ ಸ್ಥಿತಿಗೆ ಹೀಗೆನ್ನುತ್ತಾರೆ.
(A) ಸಾಲಪಾವತಿ ಶಕ್ತಿಯ ಸಮಸ್ಯೆ
(B) ದ್ರವ್ಯತೆಯ ಸಮಸ್ಯೆ
(C) ವಿತ್ತೀಯ ಮುಗ್ಗಟ್ಟು
(D) ದಿವಾಳಿತನದ ಸಮಸ್ಯೆ

**34.** ಐಆರ್ಆರ್ (IRR) ಪ್ರಕ್ಷೇಪಗಳಿಗಿಂತ ಭಿನ್ನವಾಗಿ ಮರುಹೂಡಿಕೆ ದರದೊಂದಿಗೆ ಸಂಯುಕ್ತ ಸರಾಸರಿ ವಾರ್ಷಿಕ ದರ ಲೆಕ್ಕಹಾಕುವುದನ್ನು ಹೀಗೆ ಕರೆಯುತ್ತಾರೆ.
(A) ಲಾಭದ ಸೂಚ್ಯ ದರ
(B) ಲಾಭದ ಪರಿವರ್ತಿತ ಆಂತರಿಕ ದರ
(C) ಲಾಭದ ವ್ಯತ್ಯಸ್ಥ ದರ
(D) ಲಾಭದ ಮರುಹೂಡಿಕೆ ದರ

**35.** ಕೆಳಗಿನವುಗಳಲ್ಲಿ ಯಾವುದು/ವು ಐಆರ್ಆರ್ (IRR) ಮಾನದಂಡದ ಅನುಕೂಲತೆಯಾಗಿದೆ/ಯಾಗಿವೆ ?
a. ಮಿಶ್ರ ಎನ್‌ಸಿಎಫ್ (NCF) ಗಳಿಗೆ ಮಲ್ಟಿಪಲ್ ಐಆರ್ಆರ್ ಗಳನ್ನೊದಗಿಸುತ್ತದೆ.
b. ಇದು ರಿಯಾಯಿತಿ ದರವನ್ನವಲಂಬಿಸಿಲ್ಲ.
c. ಹಣದ ಸಮಯ ಮೌಲ್ಯವನ್ನು ಇದು ಪರಿಗಣಿಸುತ್ತದೆ.

**ಸಂಕೇತಗಳು :**
(A) a ಮಾತ್ರ
(B) b ಮಾತ್ರ
(C) a ಮತ್ತು b
(D) b ಮತ್ತು c

**36.** ವೈಯಕ್ತಿಕ ಭದ್ರತಾ ಪತ್ರಗಳ ಸಾಟಿಯಿಲ್ಲದ ಅನಿಶ್ಚಿತತೆಗಳಿಂದುಂಟಾಗುವ ಅಪಾಯಕ್ಕೆ ಹೀಗೆನ್ನುತ್ತಾರೆ.
(A) ವ್ಯವಸ್ಥಿತ ಅಪಾಯ
(B) ವ್ಯವಸ್ಥಿತವಲ್ಲದ ಅಪಾಯ
(C) ಮಾರುಕಟ್ಟೆ ಅಪಾಯ
(D) ಒಟ್ಟು ಅಪಾಯ

**30.** Price elasticity is
(A) The slope of the demand curve
(B) Usually greater than unity
(C) Usually less than unity
(D) A ratio of relative change between a dependent variable and an independent variable

**31.** Match the following :

| **List – I** | **List – II** |
|---|---|
| a. NI model | I. Cost of equity increase rapidly under extreme leverage |
| b. NOI model | II. Cost of equity decrease under extreme leverage |
| c. Traditional hypothesis | III. Cost of equity is constant for all leverage |
| d. MM's hypothesis | IV. Cost of equity increase with increase in leverage |
| | V. Cost of equity decrease with an increase in leverage |

**Codes :**

| | a | b | c | d |
|---|---|---|---|---|
| (A) | V | IV | I | II |
| (B) | III | IV | II | I |
| (C) | III | IV | I | II |
| (D) | IV | III | I | II |

**32.** ____________ assumes that the debt market is divided into several segments based on maturity of debt.
(A) Liquidity theory
(B) Segmented market theory
(C) Expectation theory
(D) Liquidity premium theory

**33.** A condition when promises to creditors of a company are broken or honoured with great difficulty, is known as
(A) Problem of solvency
(B) Problem of liquidity
(C) Financial distress
(D) Problem of insolvency

**34.** The compound average annual rate that is calculated with a reinvestment rate different than the projects IRR is called
(A) Implicit rate of return
(B) Modified internal rate of return
(C) Differential rate of return
(D) Reinvestment rate of return

**35.** Which of the following is/are merits of IRR criteria ?
a. Provides multiple IRRs for mixed NCFs.
b. It is independent of discount rate.
c. It considers time value of money.

**Codes :**
(A) only a
(B) only b
(C) a and b
(D) b and c

**36.** Risk arising from the unique uncertainties of individual securities is known as
(A) Systematic risk
(B) Unsystematic risk
(C) Market risk
(D) Total risk

**37.** ಎಸ್‌ಡಿಆರ್ (SDR) ನ ಮೌಲ್ಯ ನಿರ್ಧರಿಸುವಲ್ಲಿ ಅತ್ಯಧಿಕ ಮಾನ್ಯತೆ ಹೊಂದಿರುವ ಕರೆನ್ಸಿ

(A) ಬ್ರಿಟಿಷ್ ಪೌಂಡ್

(B) ಯುರೊ

(C) ಯುಎಸ್ ಡಾಲರ್

(D) ಯೆನ್

**38.** ವಿಶ್ವಬ್ಯಾಂಕ್‌ನ ಸದಸ್ಯರು ಪಡೆಯುವ ನೆರವಿನ ಸ್ವರೂಪ

(A) ತಾಂತ್ರಿಕ ಮತ್ತು ಆರ್ಥಿಕ

(B) ರಾಜಕೀಯ ಮತ್ತು ವಿತ್ತೀಯ

(C) ತಾಂತ್ರಿಕ ಮತ್ತು ಹಣಕಾಸು

(D) ರಾಜನೀತಿ ಮತ್ತು ಆರ್ಥಿಕ

**39.** ಸಂಸ್ಥೆಗಳ ಮೇಲೆ ವಿದೇಶಿ ವಿನಿಮಯ ದರಗಳು ಬೀರುವ ಪರಿಣಾಮವನ್ನು ಹೀಗೆಂದು ಉಲ್ಲೇಖಿಸಲಾಗುತ್ತದೆ.

(A) ಆರ್ಥಿಕ ಒಡ್ಡಲ್ಪಡುವಿಕೆ (ಎಕ್ಸ್‌ಪೋಜರ್)

(B) ಆಸ್ತಿ–ಹೊಣೆ ಪಟ್ಟಿ ಅನಾವರಣ (ಎಕ್ಸ್‌ಪೋಜರ್)

(C) ವ್ಯವಹಾರ ಅನಾವರಣ (ಎಕ್ಸ್‌ಪೋಜರ್)

(D) ಕಾರ್ಯ ನಿರ್ವಹಣಾ ಮಾನ್ಯತೆ (ಎಕ್ಸ್‌ಪೋಜರ್)

**40.** **ಪ್ರತಿಪಾದನೆ (A)** : ಸಂಪತ್ತು ಗರಿಷ್ಠೀಕರಣವು ಲಾಭ ಗರಿಷ್ಠೀಕರಣದ ಮೇಲ್ವಿಚಾರಕ ಎಂದು ಪರಿಗಣಿಸಲ್ಪಟ್ಟಿದೆ.

**ಸಮರ್ಥನೆ (R)** : ಸಂಪತ್ತು ನಿಖರವಾಗಿ ನಿವ್ವಳ ಪ್ರಸ್ತುತ ಮೌಲ್ಯವೆಂದು ವ್ಯಾಖ್ಯಾನಗೊಂಡಿದೆ ಮತ್ತು ಅದು ಹಣ ಮತ್ತು ಅಪಾಯಗಳ ಸಮಯ ಮೌಲ್ಯಕ್ಕೆ ಉತ್ತರದಾಯಿಯಾಗಿದೆ.

**ಸಂಕೇತಗಳು :**

(A) ಪ್ರತಿಪಾದನೆ ಮತ್ತು ಸಮರ್ಥನೆಗಳೆರಡೂ ಸರಿ

(B) ಪ್ರತಿಪಾದನೆ ಮತ್ತು ಸಮರ್ಥನೆಗಳೆರಡೂ ಸರಿಯಲ್ಲ

(C) ಪ್ರತಿಪಾದನೆ ಸರಿಯಾಗಿದೆ ಮತ್ತು ಸಮರ್ಥನೆ ಸರಿಯಾಗಿಲ್ಲ

(D) ಪ್ರತಿಪಾದನೆ ಸರಿಯಾಗಿಲ್ಲ ಮತ್ತು ಸಮರ್ಥನೆ ಸರಿಯಾಗಿದೆ

**41.** ಮಧ್ಯರೇಖೆ (ಮೀಡಿಯನ್), ಚತುರ್ಥಕಗಳು ಮತ್ತು ಶೇಕಡಾಗಳು ಇವುಗಳ ಮಾಪನಗಳೆಂದು ಪರಿಗಣಿಸಲ್ಪಟ್ಟಿವೆ.

(A) ವಿಚಲನ ಸರಾಸರಿಗಳು

(B) ಗಣಿತೀಯ ಸರಾಸರಿಗಳು

(C) ಸ್ಥಾನಿಕ ಸರಾಸರಿಗಳು

(D) ಕೇಂದ್ರೀಯ ಸರಾಸರಿಗಳು

**42.** ಸರಾಸರಿಯಿಂದ ವಿಚಲನಗಳನ್ನು ಪಡೆದು ಅವುಗಳ ವರ್ಗಗಳನ್ನು ಪರಿಮಾಣಗಳ ಒಟ್ಟು ಸಂಖ್ಯೆಯಿಂದ ಭಾಗಿಸಿದರೆ ಸಿಗುವ ಫಲಿತಾಂಶವೇ

(A) ಮಾನಕ ವಿಚಲನ

(B) ಭಿನ್ನತೆ (ವೇರಿಯನ್ಸ್)

(C) ಹರವು

(D) ವಿಚಲನ

**43.** ಕೇಂದ್ರೀಯ ಮೌಲ್ಯದ ಎರಡೂ ಬದಿಗೆ ಸಂಗ್ರಹಿಸಿದ ಡೇಟಾ ಹಂಚಿಕೆಯ ಸಮಮಿತಿಯೊಂದಿಗೆ ಇದು ವ್ಯವಹರಿಸುತ್ತದೆ.

(A) ಪ್ರವಣತೆ (ಸ್ಕ್ಯೂನೆಸ್)

(B) ಕರ್ಟೋಸಿಸ್

(C) ಮೊಮೆಂಟ್ಸ್

(D) ಹರವು (ಡಿಸ್‌ಪರ್ಷನ್)

**44.** **ಹೇಳಿಕೆ (A)** : ಚದುರಿದ (ಸ್ಕ್ಯಾಟರ್) ರೇಖಾಚಿತ್ರದಲ್ಲಿ ಸ್ವತಂತ್ರ ಚರಾಂಶವನ್ನು X-ಅಕ್ಷದ ಮೇಲೆ ತೋರಿಸಿದಾಗ ಅದನ್ನವಲಂಬಿಸಿದ ಚರಾಂಶವನ್ನು Y-ಅಕ್ಷದ ಮೇಲೆ ತೋರಿಸಲಾಗುತ್ತದೆ.

**ಹೇಳಿಕೆ (B)** : ಶ್ರೇಣಿಗಳ ಪರಸ್ಪರ ಸಂಬಂಧದ ಗುಣಾಂಕವು ಪಿಯರ್ಸನ್‌ರ ಕೋರಿಲೇಶನ್ ಕೋಎಫಿಶಂಟ್‌ನಷ್ಟೇ ಏಕಮಾನಗಳನ್ನು ಹೊಂದಿರುತ್ತದೆ.

**ಸಂಕೇತಗಳು :**

(A) (A) ಮತ್ತು (B) ಹೇಳಿಕೆಗಳೆರಡೂ ನಿಜ

(B) (A) ಮತ್ತು (B) ಹೇಳಿಕೆಗಳೆರಡೂ ಸುಳ್ಳು

(C) ಹೇಳಿಕೆ (A) ನಿಜ, ಆದರೆ ಹೇಳಿಕೆ (B) ಸುಳ್ಳು

(D) ಹೇಳಿಕೆ (A) ಸುಳ್ಳು, ಆದರೆ ಹೇಳಿಕೆ (B) ನಿಜ

**37.** The currency having highest weightage in the determination of the value of SDR is

(A) British Pound

(B) Euro

(C) US Dollar

(D) Yen

**38.** The form of assistance that members of World Bank get is

(A) Technical and economic

(B) Political and financial

(C) Technical and financial

(D) Political and economic

**39.** Foreign exchange rates have an impact on firms which is referred to as

(A) Economic exposure

(B) Balance sheet exposure

(C) Transaction exposure

(D) Operating exposure

**40.** **Assertion (A)** : Wealth maximisation is considered as supervisor to profit maximisation.

**Reason (R)** : This is because wealth is precisely defined as net present value and it accounts for time value of money and risk.

**Codes :**

(A) Both assertion and reasoning are correct

(B) Both assertion and reasoning are not correct

(C) Assertion is correct and reasoning is not correct

(D) Assertion is not correct and reasoning is correct

**41.** Median, quartiles and percentiles are considered as measures of

(A) Deviation averages

(B) Mathematical averages

(C) Positional averages

(D) Central averages

**42.** When deviations from mean are squared and divided by the total number of observations, the resultant is

(A) Standard deviation

(B) Variance

(C) Dispersion

(D) Deviation

**43.** ____________ deals with the symmetry of the distribution of collected data on both sides of central value.

(A) Skewness

(B) Kurtosis

(C) Moments

(D) Dispersion

**44.** **Statement (A)** : In a scatter diagram, the independent variable is shown on the X-axis while the dependent variable is shown on the Y-axis.

**Statement (B)** : The coefficient of rank correlation has the same units as the Pearsonian coefficient of correlation.

**Codes :**

(A) Both statements (A) and (B) are true

(B) Both statements (A) and (B) are false

(C) Statement (A) is true, but statement (B) is false

(D) Statement (A) is false, but statement (B) is true

**45.** ಇವುಗಳನ್ನು ಹೊಂದಿಸಿ.

| ಪಟ್ಟಿ – I | ಪಟ್ಟಿ – II |
|---|---|
| a. ಆರ್. ಎ. ಫಿಶರ್ | I. ರ್‍ಯಾಂಕ್ ಕೋರಿಲೇಶನ್ |
| b. ಕಾರ್ಲ್ ಪಿಯರ್ಸನ್ | II. ಅನೋವಾ |
| c. ಸ್ಪಿಯರ್ಮನ್ | III. ಸ್ಟುಡೆಂಟ್ಸ್ ಟಿ ಡಿಸ್ಟ್ರಿಬ್ಯೂಷನ್ (ವಿದ್ಯಾರ್ಥಿಗಳ ಟಿ ಹಂಚಿಕೆ) |
| d. ಗೊಸ್ಸೆಟ್ | IV. ಕೋರಿಲೇಶನ್ (ಪರಸ್ಪರ ಸಂಬಂಧ) |

**ಸಂಕೇತಗಳು :**

| | a | b | c | d |
|---|---|---|---|---|
| (A) | IV | III | I | II |
| (B) | III | IV | II | I |
| (C) | III | I | IV | II |
| (D) | II | IV | I | III |

**46.** 'ಎ' ಯು 20 ಪ್ರತಿಶತ ಪ್ರಕರಣಗಳಲ್ಲಿ ಸತ್ಯ ಹೇಳುತ್ತಾನೆ ಮತ್ತು 'ಬಿ' 40 ಪ್ರತಿಶತ ಪ್ರಕರಣಗಳಲ್ಲಿ ಸತ್ಯ ಹೇಳುತ್ತಾನಾದರೆ, ನಿರ್ದಿಷ್ಟ ಪ್ರಕರಣವೊಂದರಲ್ಲಿ ಅವರು ತದ್ವಿರುದ್ಧವಾಗಿ ಮಾತಾಡುವ ಸಂಭವನೀಯತೆ ಎಷ್ಟು ?

(A) 0.8 (B) 0.12

(C) 0.32 (D) 0.44

**47.** ಒಂದು ಚರಾಂಶ ಇನ್ನೊಂದು ಚರಾಂಶ (ವೇರಿಯೇಬಲ್) ದ ಮೇಲೆ ಮಾಡುವ ಪರಿಣಾಮ ಶೋಧನೆಗೆ ಸಂಬಂಧಿಸಿದ ರಿಸರ್ಚ್ (ಸಂಶೋಧನಾ) ಪದ್ಧತಿಗೆ ಹೀಗೆ ಹೇಳಲಾಗುತ್ತದೆ.

(A) ಅವಲಂಬಿತ ಸಂಶೋಧನೆ (ಡಿಪೆಂಡೆಂಟ್ ರಿಸರ್ಚ್)

(B) ಕಾರಣಾರ್ಥಕ ಸಂಶೋಧನೆ (ಕೌಸಲ್ ರಿಸರ್ಚ್)

(C) ಪರಿಶೋಧನಾತ್ಮಕ ಸಂಶೋಧನೆ (ಎಕ್ಸ್‌ಪ್ಲೋರೇಟರಿ ರಿಸರ್ಚ್)

(D) ಸಮಕಾಲೀನ ಸಂಶೋಧನೆ (ಕಂಟೆಂಪರರಿ ರಿಸರ್ಚ್)

**48.** ಮತದಾರರ ಪಟ್ಟಿ, ವಿಶ್ವವಿದ್ಯಾಲಯವೊಂದರ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ದೂರವಾಣಿ ಡೈರೆಕ್ಟರಿ ಇವೆಲ್ಲ _______ ನ ಕೆಲವು ಉದಾಹರಣೆಗಳಾಗಿವೆ.

(A) ಸ್ಯಾಂಪ್ಲಿಂಗ್ ಜೋಡಣೆಗಳು (ಫ್ರೇಮ್ಸ್)

(B) ಸ್ಯಾಂಪ್ಲಿಂಗ್ ಘಟಕ (ಯುನಿಟ್)

(C) ವ್ಯವಸ್ಥಿತ (ಸಿಸ್ಟೆಮ್ಯಾಟಿಕ್) ಸ್ಯಾಂಪ್ಲಿಂಗ್

(D) ಸಮೂಹ (ಕ್ಲಸ್ಟರ್) ಸ್ಯಾಂಪ್ಲಿಂಗ್

**49.** ಕೆಳಗಿನವುಗಳನ್ನು ಹೊಂದಿಸಿ.

| ಪಟ್ಟಿ – I | ಪಟ್ಟಿ – II |
|---|---|
| a. ಯಾದೃಚ್ಛಿಕ ಸ್ಯಾಂಪ್ಲಿಂಗ್ | I. ದ್ವಿತೀಯ ಡೇಟಾ |
| b. ಯಾದೃಚ್ಛಿಕವಲ್ಲದ ಸ್ಯಾಂಪ್ಲಿಂಗ್ | II. ಮಾಹಿತಿ ವ್ಯವಸ್ಥೆ |
| c. ಜನಗಣತಿ ವರದಿ | III. ಸಮೂಹ (ಕ್ಲಸ್ಟರ್) ಸ್ಯಾಂಪ್ಲಿಂಗ್ |
| d. ಡೇಟಾ ಪರಿಷ್ಕರಣೆ | IV. ಸ್ತರೀಕೃತ (ಸ್ಟ್ರೇಟಿಫೈಡ್) ಸ್ಯಾಂಪ್ಲಿಂಗ್ |

**ಸಂಕೇತಗಳು :**

| | a | b | c | d |
|---|---|---|---|---|
| (A) | III | IV | II | I |
| (B) | IV | I | II | III |
| (C) | II | III | IV | I |
| (D) | IV | III | I | II |

**50.** ಉಪಯೋಗಿಸಲಾದ ಪಾರಿಭಾಷಿಕ (ಟೆಕ್ನಿಕಲ್) ಶಬ್ದಗಳ ಪಟ್ಟಿಗೆ ಹೀಗೆನ್ನುತ್ತಾರೆ.

(A) ಸಂಕ್ಷೇಪಣಗಳು

(B) ಶಬ್ದಸಂಗ್ರಹ (ಗ್ಲಾಸರಿ)

(C) ಉಲ್ಲೇಖಗಳು

(D) ಅನುಬಂಧ

**45.** Match the following :

| | **List – I** | | **List – II** |
|---|---|---|---|
| a. | R. A. Fisher | I. | Rank correlation |
| b. | Karl Pearson | II. | Anova |
| c. | Spearman | III. | Student's t distribution |
| d. | Gosset | IV. | Correlation |

**Codes :**

| | **a** | **b** | **c** | **d** |
|---|---|---|---|---|
| (A) | IV | III | I | II |
| (B) | III | IV | II | I |
| (C) | III | I | IV | II |
| (D) | II | IV | I | III |

**46.** If A speaks truth in 20 per cent cases and B speaks truth in 40 per cent cases, what is the probability that they would contradict in a particular case ?

(A) 0.8 (B) 0.12

(C) 0.32 (D) 0.44

**47.** Research method which is concerned with exploring the effect of one variable on another is known as

(A) Dependent research

(B) Causal research

(C) Exploratory research

(D) Contemporary research

**48.** The list of voters, number of students in a university and the telephone directory are some of the examples of

(A) Sampling frames

(B) Sampling unit

(C) Systematic sampling

(D) Cluster sampling

**49.** Match the following :

| | **List – I** | | **List – II** |
|---|---|---|---|
| a. | Random sampling | I. | Secondary data |
| b. | Non-random sampling | II. | Information system |
| c. | Census report | III. | Cluster sampling |
| d. | Data processing | IV. | Stratified sampling |

**Codes :**

| | **a** | **b** | **c** | **d** |
|---|---|---|---|---|
| (A) | III | IV | II | I |
| (B) | IV | I | II | III |
| (C) | II | III | IV | I |
| (D) | IV | III | I | II |

**50.** The list of technical terms used is called

(A) Abbreviations

(B) Glossary

(C) References

(D) Appendix

**51.** ಕಾರ್ಲ್ ಜಂಗ್ ತಮ್ಮ ಸಿದ್ಧಾಂತದಲ್ಲಿ ವ್ಯಕ್ತಿತ್ವವು ಈ ಕೆಳಗಿನ ಆಯಾಮ/ ಆಯಾಮಗಳನ್ನು ಹೊಂದಿರುವುದನ್ನು ವಿವರಿಸುತ್ತಾರೆ.

i. ವ್ಯಕ್ತಿತ್ವ ತಾರ್ಕಿಕ ಪ್ರತಿಪಾದನೆಗಳನ್ನೊಳಗೊಳ್ಳುತ್ತದೆ.

ii. ವ್ಯಕ್ತಿತ್ವವು ವಿಷಯಗಳನ್ನು ಸಾಮಾನ್ಯ ಅರ್ಥದಲ್ಲಿ ಗ್ರಹಿಸುವಿಕೆಯೊಂದಿಗೆ ವ್ಯವಹರಿಸುತ್ತದೆ.

iii. ವ್ಯಕ್ತಿತ್ವ ಸುಪ್ತಾವಸ್ಥೆಯಲ್ಲಿ ವಿಷಯಗಳನ್ನು ಆಂತರಿಕವಾಗಿ ಗ್ರಹಿಸುವಿಕೆಯನ್ನಾಧರಿಸಿದೆ.

**ಸಂಕೇತಗಳು :**

(A) i, ii ಮತ್ತು iii

(B) i ಮತ್ತು ii

(C) i ಮತ್ತು iii

(D) ii ಮತ್ತು iii

**52.** ಮಾರ್ಗ–ಗುರಿ ಸಿದ್ಧಾಂತ (ಪಾತ್–ಗೋಲ್ ಥಿಯರಿ)ವನ್ನು ರೂಪಿಸಿದವರು

(A) ಪೌಲ್ ಹರ್ಸೇ

(B) ಬ್ಲೇಕ್ ಮತ್ತು ಮೌಟನ್

(C) ರಾಬರ್ಟ್ ಹೌಸ್

(D) ಫೀಲ್ಡರ್

**53.** **ಪ್ರತಿಪಾದನೆ (A)** : ಒತ್ತಡವು ಬರಿ ಆತಂಕ ಅಥವಾ ಧೈರ್ಯಹೀನತೆಯಲ್ಲ, ಮಾನಸಿಕ ಉದ್ವೇಗ.

**ಸಮರ್ಥನೆ (R)** : ಒತ್ತಡಕ್ಕೆ ಮಿತಿಮೀರಿದ ಕೆಲಸವೊಂದೇ ಕಾರಣವಲ್ಲ.

(A) (A) ಮತ್ತು (R) ಗಳೆರಡೂ ಸರಿ

